5. ವಿಷಯ: ರಾಜ್ಯದಲ್ಲಿ ಮಾದಕ ವಸ್ತುಗಳಿಂದ ವಿದ್ಯಾರ್ಥಿ ಸಮೂಹ ಬಲಿಯಾಗುತ್ತಿರುವ ಬಗ್ಗೆ.

ಶ್ರೀ ಯು.ಟಿ. ಖಾದರ್ (ಮಂಗಳೂರು): ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಾತ್ರವಲ್ಲ ಇಡೀ ರಾಜ್ಯದಲ್ಲಿ ಇವತ್ತು ಮಾದಕ ದ್ರವ್ಯ ಸಾರಾಯಿ, ಸಿಗರೇಟು ಚಟಕ್ಕೆ ವಿದ್ಯಾರ್ಥಿ ಸಮೂಹ ಬಲಿಯಾಗುತ್ತಿದೆ. ಮಂಗಳೂರಿನಲ್ಲಿ ಕುಮಾರಿ ಸ್ನೇಹ ಎಂಬ ಸಹೋದರಿ ಇಂತಹ ಒಂದು ಮಾದಕ ದ್ರವ್ಯಕ್ಕ ಬಲಿಯಾಗಿ ಸಾವನ್ನಪ್ಪಿರುವ ಘಟನೆ ನಡೆದಿದೆ. ಈ ಬಗ್ಗೆ ಸರ್ಕಾರ ಹಾಗೂ ಪೊಲೀಸ್ ಇಲಾಖೆಯು ಯಾವ ಕ್ರಮ ಕೈಗೊಂಡಿದೆ? ಮುಖ್ಯವಾಗಿ ಇದನ್ನು ಸಪ್ಲೈ ಮಾಡುತ್ತಿರುವ ಮುಖ್ಯಸ್ಥರು ಯಾರಿದ್ದಾರೆ ಅವರನ್ನು ಶಿಕ್ಷಿಸಲು ಕಠಿಣ ಕ್ರಮ ಸರ್ಕಾರ ಏನು ತೆಗೆದುಕೊಂಡಿದೆ? ಡ್ರಗ್ ಮಾಫಿಯಾವನ್ನು ನಿಗ್ರಹಿಸುವುದಕ್ಕೆ ಪೊಲೀಸ್ ಇಲಾಖೆಯು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬಹುಶಃ ಮುಂದಿನ ದಿನಗಳಲ್ಲಿ ಬಹಳಷ್ಟು ಸಮಸ್ಯೆಯುಂಟಾಗುತ್ತದೆ. ಇಂತಹ ಘಟನೆ ನಡೆದ ಕೂಡಲೇ ಮಾದಕ ವಸ್ತು ಇಟ್ಟಿರುವ ಗೋಡೌನ್‌ಗಳನ್ನು ರೈಡ್ ಮಾಡಬೇಕು. ಆಗ ಮಾರುವವನಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ರಾಜ್ಯ ಸರ್ಕಾರ ಯುವಜನರು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಗಮನದಲ್ಲಿಟ್ಟುಕೊಂಡು ಯಾರ್ಯಾರು ಆ ಮಾಫಿಯಾ ಗ್ಯಾಂಗ್‌ನಲ್ಲಿದ್ದಾರೆ. ಯಾರು ಇದನ್ನು ಸಪ್ಲೈ ಮಾಡುತ್ತಿದ್ದಾರೆ ಅದನ್ನು ಬುಡ ಸಮೇತ ನಿಲ್ಲಿಸಿ, ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಬಹಳ ಗಂಭೀರವಾದ ಒಂದು ಪ್ರಶ್ನೆಯನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಂಗಳೂರು ಜಿಲ್ಲೆಯಲ್ಲಿ ಮಾದಕ ದ್ರವ್ಯ, ಜೂಜು, ಅಕ್ರಮ ಸಾರಾಯಿ ದಂಧೆಯನ್ನು ನಿಗ್ರಹಿಸಲು ಪೊಲೀಸ್ ಇಲಾಖೆ, ಸರ್ಕಾರ ವಿಫಲವಾಗಿ ಹಲವಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ

ಮಂಗಳೂರಿನಲ್ಲಿ ಕಾಲೇಜು ವಿದ್ಯಾರ್ಥಿ ಸ್ನೇಹ ಎಮಬುವವರು ದುಶ್ಚಟಕ್ಕೆ ಬಲಿಯಾದ ಬಗ್ಗೆ ಹೇಳಿದ್ದಾರೆ. ಗೃಹ ಇಲಾಖೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ನಾನು ಕೂಡಲೇ ಹೇಳುವುದಕ್ಕೆ ಉತ್ತರ ಲಭ್ಯವಿಲ್ಲ. ಈ ಬಗ್ಗೆ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತೇನೆ. ಜೊತೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಅಧಿಕೃತವಾಗಿ ಉತ್ತರವನ್ನು ಕೊಡುತ್ತೇನೆ.

ಸಭಾಧ್ಯಕ್ಷರು: ಇದು ಶೂನ್ಯ ವೇಳೆ.

ಶ್ರೀ ಎನ್. ಯೋಗೀಶ್ ಭಟ್ (ಉಪಾಧ್ಯಕ್ಷರು) : ಒಂದೇ ಒಂದು ವಿನಂತಿ ಇದರ ಬಗ್ಗೆ ಸಮಗ್ರವಾದ ಅಧ್ಯಯನವನ್ನು ಮಾಡಿ ಒಂದು ವರದಿಯನ್ನು ಕೊಟ್ಟಿದ್ದೇವೆ. ಅನೇಕ ಶಿಫಾರಸ್ಸುಗಳನ್ನು ಮಾಡಿದೇವೆ. ರಾಜ್ಯದಲ್ಲಿ ಇದು ಬಹಳ ಅಪಾಯಕರ ರೀತಿಯಲ್ಲಿ ಪಸರಿಸುತ್ತಿದೆ. ಯುವ ಜನಾಂಗದಲ್ಲಿ ಅದರಲ್ಲೂ ವಿದ್ಯಾರ್ಥಿ ಕ್ಷೇತ್ರದಲ್ಲಿ ಬಹಳ ವ್ಯಾಪಕವಾಗಿ ಪಸರಿಸುತ್ತಿದೆ. ಈ ಬಗ್ಗೆ ಸರ್ಕಾರ ಕೊಟ್ಟಿರುವಂತಹ ಶಿಫಾರಸ್ಸಿನ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಜ್ಞಾ ಪೂರ್ವಕವಾಗಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಯು.ಟಿ. ಖಾದರ್ ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಇದು ಶೂನ್ಯವೇಳೆಯಾಗಿರುವುದರಿಂದ ನೀವು ಮತ್ತೆ ಮತ್ತೆ ಕೇಳಿದರೆ ಆಗುವುದಿಲ್ಲ.

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಚರ್ಚೆಯನ್ನು ತೆಗೆದುಕೊಳ್ಳೋಣ.